ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೈಗಾರಿಕಾ ಇಲಾಖೆಯಲ್ಲಿ 1991 ರಿಂದ ಈಗಾಗಲೇ ಜಾರಿಯಲ್ಲಿರುತ್ತದೆ.

ಆ) ವರದಿ ಸರ್ಕಾರಕ್ಕೆ 30.12.1986 ರಂದು ಸಲ್ಲಿಸಲಾಯಿತು.

ಇ) ಸರೋಜಿನಿ ಮಹಿಷಿ ವರದಿಯ ಆಧಾರದ ಮೇಲೆ ರಾಜ್ಯದಲ್ಲಿರುವ 837 ಕೈಗಾರಿಕೆಗಳಲ್ಲಿ ಒಟ್ಟು 2,50,733 ಉದ್ಯೋಗಗಳಲ್ಲಿ 2,43,263 ಕನ್ನಡಿಗರಿಗೆ ಅವಕಾಶ ಕಲ್ಪಿಸಲಾಗಿದೆ.

ಈ) ಬಹುತೇಕ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಅವಕಾಶ ನೀಡಿರುತ್ತಾರೆ. ಉದ್ಯೋಗಾವಕಾಶ ನೀಡದಿರುವ ಕೈಗಾರಿಕೆಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಬಂದರೆ ಕೂಡಲೇ ಸೂಕ್ತ ಒತ್ತಡ ತರಲಾಗುವುದು.

ಉ) ಉತ್ತೇಜನ/ರಿಯಾಯಿತಿ ಕೊಡುವ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ:ಸಿಐ 167 ಎಸ್‌ಪಿಐ 2001, ದಿನಾಂಕ 30.6.2001ರ ಪ್ರಕಾರ ಉತ್ತೇಜನ/ರಿಯಾಯಿತಿಗಳನ್ನು ಕೊಡುವಾಗ ಅಂತಹ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗಾವಕಾಶ ಕೊಡುವಂತೆ ನೋಡಿಕೊಳ್ಳಲಾಗುತ್ತಿದೆ.

ಊ) ಉತ್ತೇಜನ/ರಿಯಾಯಿತಿಗಳನ್ನು ಕೊಡುವಾಗ ಅಂತಹ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗಾವಕಾಶ ಕೊಡುವಂತೆ ನೋಡಿಕೊಳ್ಳಲಾಗುತ್ತಿದೆ.

668 (811) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗುಡಿ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ;

ಇ) ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಶಿವಾನಂದ ಎಸ್. ನಾಯಕ (ಸಣ್ಣ ಕೈಗಾರಿಕಾ ಸಚಿವರು) :

ಅ) 148223

ಆ) ಗುಡಿ ಕೈಗಾರಿಕೆಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿದ್ದು ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇ) ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕೆಲವು ಕ್ರಮಗಳು ಕೆಳಕಂಡಂತಿವೆ.

- ವಸತಿ ಕಾರ್ಯಾಗಾರ ಹಾಗೂ ಸಾಮೂಹಿಕ ಕಾರ್ಯಾಗಾರಗಳನ್ನು ನಿರ್ಮಿಸುವುದು.
- ಸುಧಾರಿತ ಉಪಕರಣಗಳನ್ನು ನೀಡುವುದು.
- ವಿವಿಧ ವೃತ್ತಿಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು.
- ಗುಡಿ ಕೈಗಾರಿಕೆಗಳ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ವಸ್ತು ಪ್ರದರ್ಶನಗಳಲ್ಲಿ ಕಲಾ ವೈಭವ, ಯಶೋದರ್ಶನ, ಕಪಾರ್ಟ್ ಮತ್ತು ವಸ್ತು ಪ್ರದರ್ಶನ ಮತ್ತು ದೆಹಲಿಯಲ್ಲಿ ಐಐಟಿಎಫ್ ಹಾಗೂ ದಿಲ್ಲಿಹಾತ್‌ಗಳಲ್ಲಿ ಮಾರಾಟದ ಅವಕಾಶ ನೀಡುವುದು.

- ಕುಶಲಕರ್ಮಿಗಳಿಗೆ ಬ್ಯಾಂಕುಗಳಿಂದ ಸಾಲ ಪಡೆಯಲು ಅನುಕೂಲವಾಗಲು ಕ್ರೆಡಿಟ್ ಕಾರ್ಡ್‌ಗಳನ್ನು ಕೊಡಿಸುವುದು.
- ಬ್ಯಾಂಕುಗಳಿಂದ ಪಡೆದ ಸಾಲಕ್ಕೆ ಪಾವತಿಸುವ ಬಡ್ಡಿಯಲ್ಲಿ ಇಲಾಖಾ ವತಿಯಿಂದ ಶೇ. 5ರಷ್ಟು ಬಡ್ಡಿ ಸಹಾಯಧನವನ್ನು ನೀಡುವುದು.
- ಖಾದಿ ಗ್ರಾಮೋದ್ಯೋಗ ಮಂಡಳಿ / ಕಮೀಷನ್‌ನಿಂದ ಮಾರ್ಜಿನ್ ಮನಿ ಯೋಜನೆಯಡಿಯಲ್ಲಿ ಸಹಾಯ ನೀಡುವುದು.
- ನಬಾರ್ಡ್ ಡ್ರಿಪ್ ಯೋಜನೆಯಡಿಯಲ್ಲಿ ಸಾಲ.
- ಇವುಗಳಲ್ಲದೆ ನಿರ್ದಿಷ್ಟ ಅಭಿವೃದ್ಧಿಗೆ ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸಲಾಗಿದೆ. ಉದಾಹರಣೆಗೆ: ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ಮಹಾಮಂಡಳಿ, ಕರ್ನಾಟಕ ರಾಜ್ಯ ಕೈಮಗ್ಗ / ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ಇತ್ಯಾದಿ.